## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 516 |
| ಸದಸ್ಯರ ಹೆಸರು | ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 11.03.2025 |
| ಉತ್ತರಿಸುವ ಸಚಿವರು | ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಅಂದಾಜು ಎಷ್ಟು ಮೆಟ್ರಿಕ್ ಟನ್ ಪ್ರಮಾಣದ ಮರಳಿನ ಬೇಡಿಕೆ ಮತ್ತು ಕೊರತೆ ಇದೆ; ಹೊರ ರಾಜ್ಯ ಗಳಿಂದ ಎಷ್ಟು ಪ್ರಮಾಣದ ಮರಳು ಪೂರೈಕೆ ಆಗುತ್ತಿದೆ; (ಎಂ-ಸ್ಯಾಂಡ್ ಮತ್ತು ನದಿ ಮೂಲ ವಿವರ ನೀಡುವುದು) | ➢ ರಾಜ್ಯದಲ್ಲಿ ಸರ್ಕಾರಿ ಹಾಗೂ ಸಾರ್ವಜನಿಕ ನಿರ್ಮಾಣ ಕಾಮಗಾರಿಗಳಿಗೆ ಅಂದಾಜು 45 ದಶಲಕ್ಷ ಮೆಟ್ರಿಕ್ ಟನ್ ಮರಳಿನ ಬೇಡಿಕೆ ಇರುತ್ತದೆ.<br>➢ ಎಂ-ಸ್ಯಾಂಡ್ ಘಟಕಗಳಿಂದ ಅಂದಾಜು 30 ದಶಲಕ್ಷ ಮೆಟ್ರಿಕ್ ಟನ್ ಎಂ-ಸ್ಯಾಂಡ್ ಪೂರೈಕೆಯಾಗುತ್ತಿರುತ್ತದೆ.<br>➢ ನದಿ ಪಾತ್ರ ಹಾಗೂ ಪಟ್ಟಾ ಜಮೀನು ಮರಳು ಬ್ಲಾಕ್ ಗಳಿಂದ ಅಂದಾಜು 03 ರಿಂದ 04 ದಶಲಕ್ಷ ಮೆಟ್ರಿಕ್ ಟನ್ ಮರಳು ಪೂರೈಕೆಯಾಗುತ್ತಿರುತ್ತದೆ.<br>➢ ಅಂದಾಜು 02 ರಿಂದ 03 ದಶಲಕ್ಷ ಮೆಟ್ರಿಕ್ ಟನ್ ಹೊರ ರಾಜ್ಯಗಳಿಂದ ಎಂ-ಸ್ಯಾಂಡ್ ಹಾಗೂ ನದಿ ಮರಳು ಪೂರೈಕೆಯಾಗುತ್ತಿರುತ್ತದೆ.<br>ಜಿಲ್ಲಾವಾರು ಎಂ-ಸ್ಯಾಂಡ್ ಘಟಕಗಳು ಹಾಗೂ ಮರಳು ಗುತ್ತಿಗೆ / ಲೈಸನ್ಸ್‌ಗಳ ವಿವರಗಳನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |
| ಆ) | ನಿರ್ಮಾಣ ಕಾಮಗಾರಿಗಳಿಗೆ ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ನಿಯಮಿತವಾಗಿ, ಪಾರದರ್ಶಕವಾಗಿ ಮರಳು ದೊರಕುವಂತೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ವಿವರ ನೀಡುವುದು). | • ಸರ್ಕಾರದ ಆದೇಶ ಸಂಖ್ಯೆ ಸಿಐ 344 ಎಂಎಂಎನ್ 2019 (ಭಾಗ-2), ದಿನಾಂಕ 10.07.2020 ರಂತೆ, ರಾಜ್ಯದ I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿ ವತಿಯಿಂದ ವಿಲೇವಾರಿ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಗ್ರಾಮ ಪಂಚಾಯಿತಿ ಮೂಲಕ ಮರಳು ವಿಲೇವಾರಿ ಮಾಡುವ ಪ್ರತಿ ಮೆಟ್ರಿಕ್ ಟನ್ ಗಳಿಗೆ ₹300/- ಗಳ ಮಾರಾಟ ದರ ನಿಗದಿ ಪಡಿಸಲಾಗಿರುತ್ತದೆ.<br>• ಸರ್ಕಾರದ ಆದೇಶ ಸಂಖ್ಯೆ ಸಿಐ ಎಂಎಂಎನ್/115/2024, ದಿನಾಂಕ 03.12.2024 ರಂತೆ, ಸರ್ಕಾರದ ಇಲಾಖೆ / ನಿಗಮ / ಮಂಡಳಿ / ಸಂಸ್ಥೆಗಳ ಮರಳು ಗಣಿಗಾರಿಕೆಯೊಂದಿಗೆ IV, V ಮತ್ತು ಉನ್ನತ ಶ್ರೇಣಿಗಳ ಹೊಳೆ/ ನದಿಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳು ಬ್ಲಾಕ್ ಗಳನ್ನು ಇ-ಟೆಂಡರ್ ಮೂಲಕ ವಿಲೇಪಡಿಸಲು ಅವಕಾಶ ಕಲ್ಪಿಸಲಾಗಿದೆ.<br>• ಮುಂದುವರೆದು, ಸದರಿ ಆದೇಶದಲ್ಲಿ ಅಣೆಕಟ್ಟು ಜಲಾಶಯ ಮತ್ತು ಅಣೆಕಟ್ಟಿನ ಹಿನ್ನೀರಿನ ನದಿ ಪಾತ್ರಗಳಲ್ಲಿ ಮರಳು ಗಣಿಗಾರಿಕೆ ನಡೆಸಿ, ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ ಮರಳಿಗೆ ಮತ್ತು ನದಿಪಾತ್ರದಲ್ಲಿ ಗುರುತಿಸುವ ಮರಳು ಬ್ಲಾಕ್ ಗಳನ್ನು ಟೆಂಡರ್ ಮೂಲಕ ಗುತ್ತಿಗೆ ಪಡೆದು ಮರಳು ಬ್ಲಾಕ್ ಗಳಿಂದ ಸಾರ್ವಜನಿಕರಿಗೆ ಮತ್ತು ಸರ್ಕಾರಿ ಕಾಮಗಾರಿಗಳಿಗೆ ಪೂರೈಸುವ- |

| | | |
|---|---|---|
| | | -ಮರಳು ಮಾರಾಟ ದರವನ್ನು ₹850/-ಗಳಿಗೆ ನಿಗದಿಪಡಿಸಲಾಗಿರುತ್ತದೆ.<br>• ಮೇಲ್ಕಂಡಂತೆ, ಸರ್ಕಾರವು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ನಿಗದಿತ ಬೆಲೆಯಲ್ಲಿ ಮತ್ತು ಪಾರದರ್ಶಕವಾಗಿ ಮರಳು ದೊರೆಯುವಂತೆ ಮಾಡಲು ಕ್ರಮ ಕೈಗೊಂಡಿರುತ್ತದೆ. |
| ಇ) | ನಿರ್ಮಾಣ ಕಾಮಗಾರಿಗಳಿಗೆ ಸ್ಥಳೀಯವಾಗಿ ದೊರೆಯುವ ಮರಳನ್ನು ಎತ್ತಿನಗಾಡಿ, ಟ್ರ್ಯಾಕ್ಟರ್, ಇತ್ಯಾದಿ ಲಘು ವಾಹನಗಳ ಮೂಲಕ ಮರಳು ಸಾಗಾಣಿಕೆ ಮಾಡಲು ಸ್ಥಳೀಯವಾಗಿ ಅನುಮತಿ ಪಡೆಯಬೇಕೆ; ಹಾಗಿದ್ದಲ್ಲಿ, ಯಾರಿಂದ ಅನುಮತಿ ಪಡೆಯಬೇಕು; ಅನುಮತಿ ಇಲ್ಲದೆ ಮರಳು ಸಾಗಾಣಿಕೆ ಮಾಡುವವರ ವಿರುದ್ಧ ಕ್ರಮ ವಹಿಸುವವರು ಯಾರು ? | • ದಿನಾಂಕ 05.05.2020 ರಂದು ಹೊಸ ಮರಳು ನೀತಿ, 2020 ಹಾಗೂ ತತ್ಸಂಬಂಧ ದಿನಾಂಕ 01.12.2021ರಂದು ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು, 2021ನ್ನು ಜಾರಿಗೊಳಿಸಲಾಗಿರುತ್ತದೆ.<br>• ಸದರಿ ಮರಳು ನೀತಿ ಮತ್ತು ನಿಯಮಗಳಂತೆ, I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳನ್ನು ತೆಗೆದು ವಿಲೇವಾರಿ ಮಾಡಲು ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗಿದ್ದು, ಸ್ಥಳೀಯ ಗ್ರಾಹಕರು ಪ್ರತಿ ಟನ್ ಮರಳಿಗೆ ಸರ್ಕಾರವು ನಿಗದಿ ಪಡಿಸಿರುವ ₹300/- ಗಳನ್ನು ಸಂಬಂಧಪಟ್ಟ ಗ್ರಾಮ ಪಂಚಾಯಿತಿಗೆ ಪಾವತಿಸಿ ಮರಳು ರವಾನೆ ಪರವಾನಿಗೆ ಪಡೆದು ಸ್ಥಳೀಯ ನಿರ್ಮಾಣ ಕಾಮಗಾರಿಗಳಿಗೆ ಎತ್ತಿನಗಾಡಿ, ಟ್ರ್ಯಾಕ್ಟರ್ / ಇತರ 03 ಟನ್ ಸಾಮರ್ಥ್ಯಕ್ಕಿಂತ ಕಡಿಮೆ ಇರುವ ವಾಹನಗಳಲ್ಲಿ ಮರಳನ್ನು ಸಾಗಾಣಿಕೆ ಮಾಡಿಕೊಂಡು ಬಳಸಿ ಕೊಳ್ಳಲು ಅವಕಾಶ ಕಲ್ಪಿಸಲಾಗಿರುತ್ತದೆ.<br>• I, II ಮತ್ತು III ನೇ ಶ್ರೇಣಿಯ ಹಳ್ಳಗಳ ಪಾತ್ರಗಳಲ್ಲಿ ಲಭ್ಯವಿರುವ ಮರಳಿಗೆ ಸಂಬಂಧಪಟ್ಟ ಸ್ಥಳೀಯ ಗ್ರಾಮ ಪಂಚಾಯಿತಿಗೆ ಸರ್ಕಾರವು ನಿಗದಿಪಡಿಸಿರುವ ದರವನ್ನು ಪಾವತಿಸಿ ಗ್ರಾಮ ಪಂಚಾಯಿತಿಯಿಂದ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿರುತ್ತದೆ.<br>• ಅನಧಿಕೃತ ಮರಳು ಗಣಿಗಾರಿಕೆ ತಡೆಗಟ್ಟಲು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮರಳು ಸಮಿತಿ ಹಾಗೂ ಉಪವಿಭಾಗಾಧಿ ಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕು ಮರಳು ಸಮಿತಿಯನ್ನು ರಚಿಸಲಾಗಿರುತ್ತದೆ.<br>• ಸದರಿ ಸಮಿತಿಯಲ್ಲಿ ಕಂದಾಯ, ಪೊಲೀಸ್, ಅರಣ್ಯ, ಜಿಲ್ಲಾ ಪಂಚಾಯತ್, ಲೋಕೋಪಯೋಗಿ, ಜಲ ಸಂಪನ್ಮೂಲ, ಸಣ್ಣ ನೀರಾವರಿ, ಗಣಿ ಮತ್ತು ಭೂವಿಜ್ಞಾನ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆ ಅಧಿಕಾರಿಗಳು ಸದಸ್ಯರುಗಳಾಗಿರುತ್ತಾರೆ.<br>• ಸದರಿ ಇಲಾಖೆಗಳ ಅಧಿಕಾರಿಗಳಿಗೆ ಅನಧಿಕೃತ ಮರಳು ಗಣಿಗಾರಿಕೆ ಚಟುವಟಿಕೆಗಳನ್ನು ತಡೆಯಲು ಗಣಿ ಮತ್ತು ಖನಿಜ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957ರ ಕಲಂ 4(1), 4(1-A) ಮತ್ತು ಕಲಂ 21 ಹಾಗೂ 22ರಡಿ ಮತ್ತು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು, 1994 ರ ನಿಯಮ 31-R(12) ರಡಿ ಸಂಬಂಧಪಟ್ಟ ಪೊಲೀಸ್ ಠಾಣೆಗಳಲ್ಲಿ ಹಾಗೂ ನ್ಯಾಯಾಲಯಗಳಲ್ಲಿ ಮೊಕದ್ದಮೆ ದಾಖಲಿಸಲು ಅಧಿಕಾರ ಪ್ರತ್ಯಾಯೋಜಿಸಲಾಗಿರುತ್ತದೆ. |

ಸಂಖ್ಯೆ ಸಿಐ-ಎಂಎಂಎನ್/66/2025

**(ಎಸ್.ಎಸ್.ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು.

ಅನುಬಂಧ-1

## ರಾಜ್ಯದಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ನದಿ ಪಾತ್ರದ ಮರಳು ಗುತ್ತಿಗೆ/ಲೈಸನ್ಸ್ ಪ್ರದೇಶಗಳು ಹಾಗೂ ಕ್ರಷರ್ ಘಟಕ (ಎಂ-ಸ್ಯಾಂಡ್ ಘಟಕಗಳ) ವಿವರಗಳು.

| ಕ್ರ. ಸಂ. | ಜಿಲ್ಲೆ | IV, V, VI ನೇ ಶ್ರೇಣಿಯ ಉನ್ನತ ಹಳ್ಳ / ನದಿ ಪಾತ್ರ ಗಳಲ್ಲಿ ಟೆಂಡರ್ ಕಂ-ಹರಾಜು ಬ್ಲಾಕ್ ಗಳು | ಹಟ್ಟಿ ಚಿನ್ನದ ಗಣಿ ಸಂಸ್ಥೆ ಮರಳು ಗಣಿಗಾರಿಕೆ ಕಾರ್ಯಾದೇಶ ನೀಡಿದ ಬ್ಲಾಕ್ ಗಳು | ಸರ್ಕಾರಿ ಕಾಮಗಾರಿಗಳಿಗೆ ಮೀಸಲಿರಿಸಿ ಮಂಜೂರು ಮಾಡಲಾಗಿರುವ ಮರಳು ಬ್ಲಾಕ್ ಗಳು | ಪಟ್ಟಾ ಜಮೀನಿನಲ್ಲಿ ಮರಳು ಗಣಿಗಾರಿಕೆಗೆ ಲೈಸನ್ಸ್ ಮಂಜೂರು ಮಾಡಲಾಗಿರುವ ಮರಳು ಲೈಸನ್ಸ್ ಪ್ರದೇಶಗಳು | (ಕ್ರಷರ್) ಎಂ-ಸ್ಯಾಂಡ್ ಘಟಕಗಳು |
|---|---|---|---|---|---|---|
| 1 | ಬೆಂಗಳೂರು ಗ್ರಾಮಾಂತರ | 0 | 0 | 0 | 0 | 38 |
| 2 | ಬೆಂಗಳೂರು ನಗರ | 0 | 0 | 0 | 0 | 105 |
| 3 | ತುಮಕೂರು | 0 | 0 | 0 | 0 | 70 |
| 4 | ಕೋಲಾರ | 0 | 0 | 0 | 0 | 30 |
| 5 | ಚಿಕ್ಕಬಳ್ಳಾಪುರ | 0 | 0 | 0 | 0 | 63 |
| 6 | ರಾಮನಗರ | 0 | 0 | 0 | 0 | 35 |
| 7 | ದಾವಣಗೆರೆ | 0 | 0 | 0 | 0 | 25 |
| 8 | ಚಿತ್ರದುರ್ಗ | 0 | 0 | 0 | 7 | 12 |
| 9 | ಶಿವಮೊಗ್ಗ | 3 | 0 | 3 | 0 | 19 |
| 10 | ಮೈಸೂರು | 0 | 0 | 0 | 0 | 14 |
| 11 | ಮಂಡ್ಯ | 0 | 0 | 0 | 0 | 37 |
| 12 | ಚಾಮರಾಜನಗರ | 1 | 0 | 0 | 0 | 28 |
| 13 | ಹಾಸನ | 0 | 0 | 0 | 0 | 58 |
| 14 | ದಕ್ಷಿಣ ಕನ್ನಡ | 18 | 0 | 5 | 0 | 16 |
| 15 | ಉಡುಪಿ | 5 | 0 | 8 | 0 | 15 |
| 16 | ಕೊಡಗು | 0 | 0 | 0 | 0 | 4 |
| 17 | ಚಿಕ್ಕಮಗಳೂರು | 0 | 0 | 0 | 0 | 27 |
| 18 | ಕಲಬುರಗಿ | 0 | 4 | 1 | 12 | 2 |
| 19 | ರಾಯಚೂರು | 0 | 4 | 0 | 10 | 11 |
| 20 | ಬೀದರ್ | 0 | 0 | 0 | 0 | 1 |
| 21 | ಬಳ್ಳಾರಿ | 3 | 0 | 0 | 2 | 9 |
| 22 | ವಿಜಯನಗರ | 0 | 0 | 0 | 6 | 10 |
| 23 | ಯಾದಗಿರಿ | 0 | 3 | 0 | 1 | 3 |
| 24 | ಕೊಪ್ಪಳ | 0 | 1 | 0 | 17 | 13 |
| 25 | ಬೆಳಗಾಂ | 0 | 0 | 0 | 4 | 80 |
| 26 | ವಿಜಯಪುರ | 0 | 0 | 0 | 0 | 39 |
| 27 | ಧಾರವಾಡ | 0 | 0 | 0 | 0 | 4 |
| 28 | ಗದಗ | 1 | 0 | 0 | 36 | 24 |
| 29 | ಹಾವೇರಿ | 0 | 5 | 1 | 0 | 2 |
| 30 | ಬಾಗಲಕೋಟೆ | 0 | 0 | 0 | 45 | 2 |
| 31 | ಉತ್ತರ ಕನ್ನಡ | 0 | 0 | 0 | 0 | 13 |
| | ಒಟ್ಟು | 31 | 17 | 18 | 140 | 809 |

CI-MMN-66-2025

Deputy Director (Min. Admi